ಈ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ, ಮತ್ತೊಂದು ಬಾರಿ ಮಾನವ ಸಂಪನ್ಮೂಲ ಸಚಿವರನ್ನು ಕೇಂದ್ರದ ದೆಹಲಿಯಲ್ಲಿ ಭೇಟಿ ಮಾಡಿ ಒಂದು ಐ.ಐ.ಟಿ. ತರುವಂಥ ಪ್ರಮಾಣಿಕ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಡಿ., ರೇವಣ್ಣ: (ಹೊಳೆನರಸಿಪುರ): ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಒಂದು ಸಾವಿರ ಎಕರೆ ಜಮೀನಿನಲ್ಲಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಹೋಗಿತ್ತು. ದಯಮಾಡಿ ಹಾಸನವನ್ನು ನನಪಿನಲ್ಲಿಟ್ಟುಕೊಂಡು 1 ಸಾವಿರ ಎಕರೆ ಜಾಗದಲ್ಲಿ ಐ.ಐ.ಟಿ. ತಂದರೆ ಚಿಕ್ಕಮಗಳೂರಿಗೂ ಅನುಕೂಲವಾಗುತ್ತದೆ.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಮೊದಲು ಐ.ಐ.ಟಿ. ಯನ್ನು ಕರ್ನಾಟಕಕ್ಕೆ ತರುವ ಪ್ರಯತ್ನ ಮಾಡೋಣ, ಆಮೇಲೆ, ಬೆಳಗಾವಿ, ಧಾರವಾಡ, ಹಾಸನ, ರಾಯಚೂರು ಯಾವುದಕ್ಕೆ ಕೊಡಬೇಕೆನ್ನುವ ಬಗ್ಗೆ ನಾನು ಈಗ ಉನ್ನತ ಶಿಕ್ಷಣ ಸಚಿವನಾಗಿರುವುದರಿಂದ ಚಿಕ್ಕಮಗಳೂರಿಗೆ ತರುವ ಪ್ರಯತ್ನ ಮಾಡಬಹುದು. ಈ ಬಗ್ಗೆ ಆಮೇಲೆ ಆಲೋಚನೆ ಮಾಡೋಣ.

2. ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮುಖ್ಯವಾಗಿ ಕಟ್ಟಡ, ಶೌಚಾಲಯ, ಕುಡಿಯುವ ನೀರು, ಒದಗಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ

ಶ್ರೀ ಜೆ.ಡಿ ನಾಯ್ಕ್ (ಭಟ್ಕಳ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಮುಖ್ಯವಾಗಿ ಕಟ್ಟಡ ಮತ್ತು ಶೌಚಾಲಯ, ಕುಡಿಯುವ ನೀರು ಏನು ಅನುಷ್ಠಾನ ಮಾಡಬೇಕಾಗಿತ್ತೂ, ಸಾಕಷ್ಟು ವಿಳಂಬವಾಗುತ್ತಿದೆ. ಶೀಘ್ರ ಅನುಷ್ಠಾನ ಮಾಡುವ ಬಗ್ಗೆ ನಾನು ಪ್ರಾಥಮಿಕ ಮತ್ತು ಪ್ರೌಢಶಾಲಾ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಓದಬೇಕೆಂದರೆ ಓದಿ ಹೇಳುತ್ತೇನೆ.

1. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರೌಢ ಶಿಕ್ಷಣದ ಸಾರ್ವತ್ರೀಕರಣ ಗುರಿಯನ್ನು ಈಡೇರಿಸುವ ದೃಷ್ಟಿಯಿಂದ ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ.ಎಸ್.ಎ) ಎಂದು ನೋಂದಾಯಿತವಾಗಿರುವ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಕಾರ್ಯಕ್ರಮಕ್ಕೆ ತಗಲುವ ಅನುದಾನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮವಾಗಿ 72.25ರ ಅನುಪಾತದಲ್ಲಿ ಭರಿಸುತ್ತವೆ.

2. ಈ ಕಾರ್ಯಕ್ರಮದಡಿಯಲ್ಲಿ ಕೆಳಕಂಡ 4 ವಿಭಾಗಗಳಲ್ಲಿ ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(ಅ) ಸರ್ಕಾರಿ ಪ್ರೌಢ ಶಾಲೆಗಳಿಗೆ (ಉನ್ನತೀಕರಿಸಿದ) ಹೊಸ ಶಾಲಾ ಕಟ್ಟಡಗಳನ್ನು ನಿರ್ಮಿಸುವುದು.

(ಬ) ಪ್ರಸ್ತುತ ಸರ್ಕಾರಿ ಪ್ರೌಢ ಶಾಲೆಗಳನ್ನು ಬಲವರ್ಧನೆಗೊಳಿಸುವುದಕ್ಕಾಗಿ ಕಟ್ಟಡಗಳನ್ನು ನಿರ್ಮಿಸುವುದು.

(ಕ) ಆದರ್ಶ ವಿದ್ಯಾಲಯ ಹೆಸರಿನಲ್ಲಿ ಕೇಂದ್ರೀಯ ವಿದ್ಯಾಲಯ ಮಾದರಿ ಆಧಾರ ಮಾದರಿ ಶಾಲಾ ಸಂಕೀರ್ಣವನ್ನು ನಿರ್ಮಿಸುವುದು.

(ಈ) ಸರ್ಕಾರಿ ಪ್ರೌಢ ಶಾಲೆ/ ಕೆ.ಜಿ.ಬಿ.ವಿ. ಕಟ್ಟಡಗಳಿಗೆ ಹೆಣ್ಣು ಮಕ್ಕಳ ವಸತಿ ನಿಲಯ ನಿರ್ಮಿಸುವುದು.

3. ಸರ್ಕಾರಿ ಪ್ರೌಢ ಶಾಲೆಗಳಿಗೆ (ಉನ್ನತೀಕರಿಸಿದ) ಹೊಸ ಶಾಲಾ ಕಟ್ಟಡ ಹಾಗೂ ಪ್ರಸ್ತುತ ಸರ್ಕಾರಿ ಪ್ರೌಢ ಶಾಲೆಗಳನ್ನು ಬಲವರ್ಧನೆಗೊಳಿಸುವುದಕ್ಕಾಗಿ ಕಟ್ಟಡಗಳನ್ನು ನಿರ್ಮಿಸಲು 2009–10 ಹಾಗೂ 2010–11ನೇ ಸಾಲಿನಲ್ಲಿ ಅನುಮೋದಿಸಿದ ಘಟಕ ವೆಚ್ಚ ಹಾಗೂ 2011–12ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ. ಎಸ್.ಆರ್. ಅನ್ವಯ ಪರಿಷ್ಕೃತ ಘಟಕ ವೆಚ್ಚದ ವಿವರ ಕೆಳಕಂಡತಿದೆ.

Sl. No.	Description	As per sanctioned by MHRD (lakhs)	As per revised KPWD SR 2011-12 (lakhs)	Additional Amount required (lakhs)
1	New School buildings for Upgradation	16574.76	25063.00	8222.08
2	Strengtheing of existing Govt. High School	52649.46	80245.45	27595.99
3	Construction of Adarsha Vidyalaya / Model School	22348.00	33985.24	11637.24
	Total			**47455.31**

4. ಕೆ.ಪಿ.ಡಬ್ಲ್ಯೂ.ಡಿ. ಹೊರಡಿಸಿದ ಪರಿಷ್ಕೃತ ಷೆಡ್ಯೂಲ್ ದರಗಳ ಆಧಾರ ಇರುವ ಹೆಚ್ಚುವರಿ ಘಟಕ ವೆಚ್ಚವನ್ನು ಅನುಮೋದಿಸಲು, ಶಿಕ್ಷಣ ಇಲಾಖೆ ಕೇಂದ್ರ ಸರ್ಕಾರವನ್ನು ಪಿಎಬಿ ಸಭೆಗಳಲ್ಲಿ ಹಾಗೂ ಪತ್ರಗಳ ಮೂಲಕ ಮನವಿ ಮಾಡಲಾಗಿದೆ. ಆದರೆ, ಕೇಂದ್ರ ಸರ್ಕಾರ ಘಟಕ ವೆಚ್ಚವನ್ನು ಪರಿಷ್ಕರಿಸಲು ಒಪ್ಪಿಕೊಂಡಿಲ್ಲ. ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿದ್ದು, ಶೀಘ್ರವೇ ಮೂಲಭೂತ ಸೌಕರ್ಯವನ್ನು ಒದಗಿಸುವ ಬಗ್ಗೆ ಕ್ರಮವಹಿಸಲಾಗುವುದು.

ಅಧ್ಯಕ್ಷರು : clarifications ಇದ್ದರೆ ಕೇಳಿ.

ಶ್ರೀ ಜೆ.ಡಿ ನಾಯ್ಕ್ (ಭಟ್ಕಳ): ಭಟ್ಕಳ ತಾಲ್ಲೂಕಿನ ಹೊರಟ್ಟಿ ಎನ್ನುವ ಪ್ರೌಢಶಾಲೆ ಮಾಧ್ಯಮಿಕ ಶಿಕ್ಷಣ ಯೋಜನೆಯಡಿ ಮಂಜೂರಾಗಿದೆ. ಒಟ್ಟು 5 ಪ್ರೌಢಶಾಲೆಗಳಲ್ಲಿ 2 ಉರ್ದು ಪ್ರೌಢಶಾಲೆ, 3 ಕನ್ನಡ ಪ್ರೌಢಶಾಲೆ ಮಂಜೂರಾಗಿದೆ. ಇನ್ನೂ ಕೂಡಾ ಕುಳಿತುಕೊಳ್ಳುವುದಕ್ಕೆ ಕಟ್ಟಡಗಳಿಲ್ಲ, ಬೆಂಚುಗಳಿಲ್ಲ, ಶಿಕ್ಷಕರ ಕೊರತೆ ಇದೆ, ಶೌಚಾಲಯ, ಕುಡಿಯುವ ನೀರಿನ ಕೊರತೆ ಇದೆ. ಹೊರಟ್ಟಿ ಎನ್ನುವ ಊರಿಗೆ ಕೇಂದ್ರ ಸರ್ಕಾರದಿಂದ 58 ಲಕ್ಷ ರೂಪಾಯಿ ಮಂಜೂರಾಗಿದೆ. 2 ವರ್ಷಗಳಾದರೂ ಟೆಂಡರ್ ಆಗಿಲ್ಲ ಅಥವಾ SDMC ಯವರಿಗೂ ಕಟ್ಟುವುದಕ್ಕೆ ಜವಾಬ್ದಾರಿ ಕೊಟ್ಟಿಲ್ಲ. 2 ವರ್ಷಗಳಾದರೂ ಕಟ್ಟಡ ಆಗಿಲ್ಲವೆಂದರೆ ನಮಗೆ ಸಂಶಯ ಬರುತ್ತದೆ, ಅನುದಾನ lapse ಆಗಿದೆಯೋ ಅಥವಾ ಅದರ ಜೀವ ಇದೆಯೋ ಗೊತ್ತಾಗುತ್ತಿಲ್ಲ. ದಯಮಾಡಿ ಈ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಪ್ರೌಢಶಾಲೆಗಳ ಉನ್ನತೀಕರಣಕ್ಕೆ ಮತ್ತು ಪ್ರೌಢಶಾಲೆಗಳ ಬಲವರ್ಧನೆಗೆ ಆದರ್ಶ ವಿದ್ಯಾಲಯ ಕೇಂದ್ರೀಯ ವಿದ್ಯಾಲಯದ ಮಾದರಿ ಶಾಲೆಗಳನ್ನಾಗಿ ಮಾಡುವುದಕ್ಕೆ ಮತ್ತು KGVV ಕಟ್ಟಡ, ಹೆಣ್ಣುಮಕ್ಕಳ ವಸತಿ ನಿಲಯ ಕಟ್ಟಡ ಕಟ್ಟುವುದಕ್ಕೆ ಇತ್ಯಾದಿಗಳಿಗೆ ಬೇರೆ ಬೇರೆ ರೀತಿಯ ಹಣಕಾಸಿನ ಸೌಲಭ್ಯ ನಮಗೆ ಬಂದಿದೆ. ಆದರೆ 2009–10ರಲ್ಲಿ ಬಂದ ನಂತರದಲ್ಲಿ ನಾವು ಎಸ್.ಆರ್. ರೇಟ್, ಇದು ಇಡೀ ದೇಶದ ಸಮಸ್ಯೆಯಿದೆ. ಎಲ್ಲಾ ರಾಜ್ಯದ ಶಿಕ್ಷಣ ಸಚಿವರ ಸಭೆ ಕರೆದಾಗಲೂ ಇದೊಂದು ಮುಖ್ಯ ವಿಷಯವಾಗಿ ಚರ್ಚೆಯಾಗಿದೆ. ಎಸ್.ಆರ್. ರೇಟ್ ಬದಲಾಗಿರುವುದರಿಂದ, ಬದಲಾಗಿರುವ ಎಸ್.ಆರ್. ರೇಟ್‌ಗೆ ಕೇಂದ್ರ ಸರ್ಕಾರ ನಮಗೆ

ಹಣವನ್ನು ಕೊಡಬೇಕೆಂದು ನಾವು ಕೇಳುತ್ತಿದ್ದೇವೆ. ಶೇಕಡ 72.25ರ ಪಾಲ್ಗೊಳ್ಳುವಿಕೆಯಿದೆ 75% ಕೇಂದ್ರ ಸರ್ಕಾರ ಕೊಡುತ್ತದೆ. 25% ರಾಜ್ಯ ಸರ್ಕಾರದ ಪಾಲಿದೆ. ಆದರೆ ಎಸ್.ಆರ್. ರೇಟ್ ಬದಲಾವಣೆಯಾಗಿರುವುದರಿಂದ ಕೇಂದ್ರ ಸರ್ಕಾರ ಬದಲಾಗಿರುವ ಎಸ್.ಆರ್. ರೇಟಿನ ಹಣವನ್ನು ಭರಿಸಬೇಕು ಎಂದು ನಾವು ಕೇಳುತ್ತಿದ್ದೇವೆ. ಆದರೆ ಅದಕ್ಕೆ ಕೇಂದ್ರ ಸರ್ಕಾರದೊಂದಿಗೆ ಇನ್ನೂ ಚರ್ಚೆಯನ್ನು ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಸ್ವಲ್ಪ ವಿಳಂಬವಾಗುತ್ತಿದೆ. ಆದರೆ ಕೇಂದ್ರ ಸರ್ಕಾರ ಈಗ ಕೊಡುತ್ತಿರುವಂಥ ಹಣವನ್ನು ಪೂರ್ಣ ಬಳಕೆ ಮಾಡಿಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ. ರಾಜ್ಯ ಸರ್ಕಾರದ ಭಾಗವನ್ನು ಈಗಾಗಲೇ ಹಣಕಾಸಿನ ಇಲಾಖೆ ಜೊತೆಯಲ್ಲಿ ನಾವು ಸಮಾಲೋಚನೆ ಮಾಡಿ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಸಭೆಯನ್ನು ಮಾಡಿ ಅದನ್ನು ತೆಗದುಕೊಳ್ಳುವುದಕ್ಕೆ ಒಪ್ಪಿಗೆಯಲ್ಲಿದ್ದೇವೆ. ಎಸ್.ಆರ್. ರೇಟ್ ವ್ಯತ್ಯಾಸವನ್ನು ಅವರು ಕೊಡುತ್ತಾರೋ ಅಥವಾ ನಾವೇ ಭರಿಸಬೇಕೋ ಎನ್ನುವಂಥ ಚರ್ಚೆ ಏನಿದೆ, ಉಳಿದ process ಆಗುತ್ತಿದೆ. ಟೆಂಡರ್ ಮಾಡುವುದಕ್ಕೆ ಬೇಕಾದಂಥ ಉಳಿದ process ಆಗುತ್ತಿದೆ. Simultaneously ನಾವು ಹಣವನ್ನು ಹೊಂದಾಣಿಕೆ ಮಾಡಿಕೊಳ್ಳುವುದನ್ನು ನಾವು ಮಾಡಿಕೊಳ್ಳುತ್ತೇವೆ. ಮುಂದಿನ ದಿನಗಳಲ್ಲಿ ಸಚಿವ ಸಂಪುಟದ ಎದುರಿಗೆ ಈ ವಿಷಯವನ್ನು ತಂದು ಅಗತ್ಯವಾದ ರಾಜ್ಯದ ಪಾಲಿನ ಹಣವನ್ನು ಕೊಡುವುದಕ್ಕೆ ಅಗತ್ಯ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಜೆ.ಡಿ. ನಾಯ್ಕ್: ಕೇಂದ್ರ ಸರ್ಕಾರದಿಂದ ಹಣ ಬಂದು 2 ವರ್ಷವಾಗಿದ್ದು ಹಣ ಜಮಾ ಆಗಿದೆ.

ಅಧ್ಯಕ್ಷರು: ಮಾಡುತ್ತೇವೆಂದು ಹೇಳಿದ್ದಾರೆ.

3. ವಿಷಯ : ಉತ್ತರ ಕರ್ನಾಟಕದ ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿರುವುದರಿಂದ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ನೀರಾವರಿಗೆ ತೊಂದರೆಯಾಗಿರುವ ಬಗ್ಗೆ

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿರುವುದರಿಂದ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ನೀರಾವರಿ ಸೌಲಭ್ಯಕ್ಕೆ ತೊಂದರೆಯಾಗಿರುವುದರಿಂದ,

ಶ್ರೀ ಬಸವರಾಜ ಬೊಮ್ಮಾಯಿ: (ಜಲಸಂಪನ್ಮೂಲ ಸಚಿವರು): ಮಾನ್ಯ ಅಧ್ಯಕ್ಷರೆ,